† ಶ್ರೀ ಎಸ್. ಎಂ. ಕೃಷ್ಣ.—1973ನೇ ಇಸವಿ ಮಾರ್ಚ್ ತಿಂಗಳಿನಲ್ಲಿ ಲೋಕೋಪಯೋಗಿ ಇಲಾಖೆಯ ವಶಕ್ಕೆ ಬಂತು. ಆಗಿನಿಂದ ಧಾರಣೆವಾಸಿಗಳು ಜಾಸ್ತಿಯಾಗಿರುವುದು ಸದನದ ಗಮನಕ್ಕೆ ಬಂದಿದೆ. ಜೊತೆಗೆ ಅಲ್ಲಿ 50-55 ಜನ ಕೆಲಸಮಾಡುತ್ತಿದ್ದರು. ಅಲ್ಲಿ ಕೆಲಸ ಮಾಡುತ್ತಿದ್ದ ಶ್ರಮಜೀವಿಗಳಿಗೆಲ್ಲ ಸೆಟ್ಲಿಮೆಂಟ್ಸ್ ರೇಟಿನಲ್ಲಿ ಆಹಾರವನ್ನು ಕೊಡುವ ವ್ಯವಸ್ಥೆ ಮಾಡಲಾಗುತ್ತಿತ್ತು. ಅವರಿಗೆ ಬೆಳಿಗ್ಗೆ ಮತ್ತು ರಾತ್ರಿ ಊಟ ಕೊಡಲಾಗುತ್ತಿತ್ತು. ಇದು ಕೂಡ ನಷ್ಟವಾಗಿರುವುದರಲ್ಲಿ ಸೇರಿದೆ.

ಶ್ರೀ ಹಂಜಿ ಶಿವಣ್ಣ.—ಫರ್ನಿಚರ್ಸ್, ಪಾತ್ರೆಗಳು ಮತ್ತು ಇನ್ನಿತರ ಸಾಮಾನುಗಳು ಮಾಯವಾಗಿಬಿಟ್ಟಿವೆ ಎಂಬ ದೂರು ಇದೆ; ಅದು ನಿಜವೇ ಹೇಗೆ?

ಶ್ರೀ ಎಸ್. ಎಂ. ಕೃಷ್ಣ.—ಫರ್ನಿಚರ್ಸ್ ಆಗಲೀ, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳೇ ಆಗಲೀ ಮಾಯವಾಗುವುದಕ್ಕೆ ಕಾರಣವಿಲ್ಲ; ಆ ಬಗ್ಗೆ ಯಾವ ದೂರು ಸಹ ಬಂದಿಲ್ಲ. ಈ ಪದಾರ್ಥಗಳ ದುರುಪಯೋಗವಾಗಿದೆ ಎಂಬ ಆಪಾದನೆ ಏನಾದರು ಬಂದರೆ ಅದನ್ನು ವಿಚಾರಣೆ ಮಾಡುತ್ತೇವೆ. ಮತ್ತು ಅದರ ವರದಿಯನ್ನು ಈ ಸಭೆಯ ಮುಂದೆ ಇಡುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಧಾರಣೆವಾಸಿಗಳು ಹೆಚ್ಚಾಗಿದ್ದರಿಂದ ಮತ್ತು ಅಲ್ಲಿಯ ಸಿಬ್ಬಂದಿಗಳಿಗೆ ರಿಯಾಯಿತಿ ದರದಲ್ಲಿ ಆಹಾರವನ್ನು ಒದಗಿಸಿದ್ದರಿಂದ ನಷ್ಟ ಉಂಟಾಗಿದೆ ಎಂದು ಹೇಳಿದಿರಿ; ಹಾಗಿದ್ದರೆ, ಯಾವ ಬಾಬಿನಲ್ಲಿ ಎಷ್ಟೆಷ್ಟು ನಷ್ಟ ಉಂಟಾಗಿದೆ, ಗೋದಾಮಿನಗಳಲ್ಲಿ ಬಿಗ್ಗಣಗಳು ಸೇರಿಕೊಂಡು ಎಷ್ಟು ನಷ್ಟವಾಯಿತು ಎಂಬ ಬಗ್ಗೆ ವಿವರಗಳನ್ನು ಕೊಟ್ಟರೆ ನಮಗೆ ಅನುಕೂಲವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಆ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರಗಳನ್ನು ಒದಗಿಸಿಕೊಡುತ್ತೇನೆ. ಆದರೆ ಈ ಪ್ರಶ್ನೆಯಲ್ಲಿ ಆ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ಗೌರವದಿಂದ ಹೇಳುತ್ತೇನೆ.

Food Committees in Chitradurga District

189 **Smt. C. NAGAMMA KESHAVAMURTHY** (Davanagere). —

Will the Minister for Food and Civil Supplies be pleased to state :—

(*a*) whether Food Committees both at District and Taluk Level have been formed in the State and the date on which they were formed ;

(*b*) if so, the reason for not forming the Food Commitees in Chitradurga District till now ;

(*c*) whether the Governme t intend to expedite the matter ?

Smt. E. E. VAZ (Minister for Food and Civil Supplies).—

(*a*) Yes. (*Vide* Statement placed on the Table of the House)* *

(*b*) The term of all the Advisory Committees for Food and Civil Supplies constituted during last year had expired by the time the proposal for constitution of Advisory Committee for Food and Civil Supplies in respect of Chiradurga District was finalised. Now the

** Copies placed in the Karnataka Legislature Library *vide* No. 15

question of re-constitution of all the Advisory Committees for Food and Civil Supplies is under consideration of Government. In view of this, the Advisory Committee for Food and Civil Supplies in respect of Chitradurga District will be constituted at the time of reconstitution of other Advisory Committees for Food and Civil Supplies.

(*c*) Does not arise in view of reply to clause (*b*) of the question.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟಂತೆ ಆಹಾರ ಸಮಿತಿಯನ್ನು ರಚನೆ ಮಾಡಿರುವುದಕ್ಕೆ ಕಾರಣವೇನು ? ಬೇರೆ ಜಿಲ್ಲೆಗಳಲ್ಲಿ ರಚನೆಯಾಗಿ ಇಲ್ಲಿ ಆಗದಿರುವುದಕ್ಕೆ ಕಾರಣವೇನು ಎಂಬುದನ್ನು ಹೇಳುತ್ತೀರಾ ?

† ಶ್ರೀಮತಿ ಇ. ಇ. ವಾಜ್.—ಆ ಜಿಲ್ಲೆಯಿಂದ ಈ ಬಗ್ಗೆ ಸಲಹೆಗಳು ಬರುವಾಗ ನಿಧಾನವಾಗಿತ್ತು. ಮತ್ತು ಹಿಂದಿನ ವರ್ಷ ರಚನೆಯಾದ ಸಲಹಾ ಸಮಿತಿಗಳ ಅವಧಿ ಮುಗಿಯುತ್ತಾ ಬಂದಿತ್ತು. ಈಗ ಪುನಃ ಅದನ್ನು ಮಾಡುವ ಏರ್ಪಾಡು ಇದೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈಗ ಎಲ್ಲ ಜಿಲ್ಲೆಗಳಲ್ಲಿಯೂ ಆಹಾರ ಸಮಿತಿಗಳು ಕೆಲಸ ಮಾಡುತ್ತಿವೆ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಆ ಸಮಿತಿಯ ರಚನೆ ಇನ್ನೂ ಆಗಿಲ್ಲ. ಈ ವಿಚಾರದಲ್ಲಿ ಸಧ್ಯಕ್ಕೆ ಒಂದು ಕಮಿಟಿಯನ್ನು ರಚನೆ ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್.—ಈಗ ಎಲ್ಲ ಸಮಿತಿಗಳ ಅವಧಿ ಮುಗಿದಿದೆ. ಈಗ ಮತ್ತೆ ಹೊಸದಾಗಿ ಒಂದು ಸಲಹಾ ಸಮಿತಿಯನ್ನು ರಚಿಸುವ ಬಗ್ಗೆ ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಎಂ. ವಿ. ರುದ್ರಪ್ಪ.—ಈ ಸಲಹಾ ಸಮಿತಿಯ ವಿಚಾರದಲ್ಲಿ ಮಾಹಿತಿಗಳು ಬಂದಿದ್ದರೂ ಸಹ ಸಮಿತಿಯನ್ನು ರಚನೆ ಮಾಡಿರುವುದಕ್ಕೆ ಕಾರಣವೇನು ?

ಶ್ರೀಮತಿ ಇ. ಇ. ವಾಜ್.—ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಏನೆಂದರೆ, ಅವುಗಳಿಂದ ಸಲಹೆಗಳು ಬರುವುದು ನಿಧಾನವಾಗಿದ್ದರಿಂದ ಸಲಹಾ ಸಮಿತಿ ರಚನೆ ಮಾಡುವುದು ನಿಧಾನವಾಯಿತು ಎಂದು.

Taluk Level Advisory Committees for Food and Civil Supplies in Bijapur District

203 Sri P. M. BANGI (Jamkhandi)—

Will the Minister for Food Civil Supplies be pleased to state:—

(*a*) whether it is a fact that the term of the Taluk Level Advisory Committees for Food and Civil Supplies in Bijapur District constituted as per Government Order No. FCL 16 SLF 73 (ii) dated 20-7-1973 has expired in 20-8-1974 ;

(*b*) whether it is a fact that new committees have not been constituted since then ;

(*c*) the reasons for not continuing the old committees or for not re-constituting these Advisory Committes for Bijapur and other Districts in the State ;

(*d*) whether there is any proposal before Government to extend the term of old Committees with retrospective effect from 20-8-1974 or to constitute new committees with M.L.As and other non-official members (with atleast one of them being a Harijan) ;